








**ಗುಂಡ:** ದೇವರೆ, ನಂಗೆ ಒಂದೈದ್; ಹತ್ ಕೋಟಿ ರೂಪಾಯಿ ಕೊಟ್ಬಿಡು. ನಾನು ಸುಖವಾಗಿ ಜೀವನ ಮಾಡ್ಕೊಂಡು ಇರ್ತೀನಿ.
**ದೇವರು:** ಕ್ಯಾಶ್ ರೆಡಿ ಇದೆ ನಾನಿರೋ ಜಾಗಕ್ಕೆ ಬಂದು ತಗೊಂಡು ಹೋಗು ಭಕ್ತ.

**ಗುಂಡ:** ನನ್ನ ಟಾಮಿ ಎಷ್ಟು ಬುದ್ಧಿವಂತ ಗೊತ್ತಾ? ದಿನಾ ನನಗೆ ನ್ಯೂಸ್ ಪೇಪರ್ ತಂದ್ಕೊಡುತ್ತೆ.
**ತಿಮ್ಮ:** ಅದೇನು ಮಹಾ, ಎಲ್ಲಾ ನಾಯಿಗಳೂ ಮಾಡ್ತವೆ.
**ಗುಂಡ:** ನಾನು ಪೇಪರೇ ತರಿಸೋದಿಲ್ಲ. ಆದ್ರೂ ಅದು ಎಲ್ಲಿಂದಲೋ ದಿನಾ ಪೇಪರ್ ತಂದ್ಕೊಡುತ್ತೆ.

**ಟೀಚರ್:** ಹುಡುಗಿಯು ಬೀಡಿ ಸೇದುತ್ತಾಳೆ. ಇದು ಯಾವ ಕಾಲ ಚಿಂಟು?
**ಚಿಂಟು:** ಕಲಿಗಾಲ ಮಿಸ್!

ಅರೆಬರೆ ಇಂಗ್ಲಿಷ್ ತಿಳಿದಿದ್ದ ಹೆಂಡತಿಯೊಬ್ಬಳು ಇಂಗ್ಲಿಷ್ ನ್ಯೂಸ್ ಪೇಪರ್ ಓದುತ್ತಾ...
**ಹೆಂಡತಿ:** ರೀ ಕನ್ನಡದಲ್ಲಿ ಎಂತೆಂಥಾ ಸಿನಿಮಾಗಳನ್ನು ತೆಗಿತಾರಪ್ಪ. ಇಲ್ ನೋಡಿ, 'ಬೀಡಿ ಸೇದಿ ಬಂದ' ಅಂತ ಮೂವಿ ಬರ್ತಿದೆಯಂತೆ.
**ಗಂಡ:** (ಇಂಗ್ಲಿಷ್ ಪೇಪರ್‌ನತ್ತ ಕಣ್ಣಾಯಿಸಿ) ಅದು ಬೀಡಿ ಸೇದಿ ಬಂದ ಅಲ್ಲಾ ಕಣೆ, ಬಿಡಿಸದ ಬಂಧ.

**ಅತ್ತೆ:** ಅಳಿಯಂದ್ರೆ, ನೀವು ಕುಡೀತೀರಾ? ಮದುವೆಗೆ ಮೊದಲು ಈ ವಿಷಯ ಯಾಕೆ ಹೇಳ್ಲಿಲ್ಲ?
**ಅಳಿಯ:** ನಿಮ್ಮಗಳು ರಕ್ತ ಕುಡೀತಾಳೆ ಅಂತ ನೀವೇನಾದ್ರೂ ಹೇಳಿದ್ರಾ ಏನು?

**ಗಂಡ:** ಬೆಂಡೆಕಾಯಿ ನಂಗೆ ಇಷ್ಟ ಇಲ್ಲಾ ಅಂತ ಗೊತ್ತಿದ್ರೂ ಬೆಂಡೆಕಾಯಿ ಪಲ್ಯನಾ ಯಾಕೆ ಮಾಡಿದ್ದೀಯಾ?
**ಹೆಂಡತಿ:** ಪಕ್ಕದ ಮನೆ ಪದ್ಮಿನಿ ಬೆಂಡೆಕಾಯಿ ಪಲ್ಯ ಮಾಡಿ ಫೇಸ್‌ಬುಕ್‌ನಲ್ಲಿ ಹಾಕಿದ ಪೋಸ್ಟ್‌ಗೆ ನೀವು, 'ನಂಗೆ ಬೆಂಡೆಕಾಯಿ ಪಂಚಪ್ರಾಣ, ನೀವು ಎಷ್ಟು ಚೆನ್ನಾಗಿ ಬೆಂಡೆಕಾಯಿ ಪಲ್ಯ ಮಾಡಿದ್ದೀರಿ, ಪೋಸ್ಟ್ ನೋಡ್ತಿದ್ರೆನೇ ಬಾಯಲ್ಲಿ ನೀರು ಬರುತ್ತೆ' ಅಂತ ಕಾಮೆಂಟ್ ಹಾಕಿದ್ರಿ. ಅದನ್ನ ನೋಡಿ ನಾನೂ ಮಾಡ್ದೆ.

**ಗುಂಡ:** ಗುರುಗಳೇ, ನೋಡಲು ಬೊಂಬೆಯಂತಿರೊ, ಚುರುಕಾಗಿರೊ, ಬುದ್ಧಿವಂತಿಕೆಯಿರೊ ಹಾಗೂ ಗಂಡನೊಡನೆ ಜಗಳವಾಡದ ಮಹಿಳೆಯನ್ನು ಏನಂತಾರೆ?
**ಗುರುಗಳು:** ಭ್ರಮೆ ಅಂತಾರೆ ಶಿಷ್ಯ.

**ಪತ್ನಿ:** ದ್ವೇಷಕ್ಕೂ ಸಂತೋಷಕ್ಕೂ ಏನು ವ್ಯತ್ಯಾಸ?
**ಪತಿ:** ನಾನು ನಿನ್ನನ್ನು ಬಾವಿಗೆ ನೂಕಿದರೆ ಅದು ದ್ವೇಷ. ನೀನೇ ಹೋಗಿ ಬಾವಿಗೆ ಬಿದ್ದರೆ ಅದು ನನಗೆ ಸಂತೋಷ.

**ತಿಮ್ಮ:** 'ಅಭಿರುಚಿ' ಅನ್ನೋ ಫುಡ್ ಯೂಟ್ಯೂಬ್ ಚಾನಲ್ ಶುರು ಮಾಡಿ ತುಂಬಾನೇ ಹಣ ಸಂಪಾದಿಸುತ್ತಿದ್ದಾಳೆ. ನೀನು ತುಂಬಾ ಲಕ್ಕಿ ಗುಂಡ.
**ಗುಂಡ:** ಲಕ್ಕಿ ಅಂತೆ ಲಕ್ಕಿ. ಅವಳು ಮಾಡುವ ಅಡುಗೆ ವಿಡಿಯೊಗಳನ್ನ ನೋಡಲೆಂದೇ ನೂರಾರು ಮಂದಿಗೆ ನಾನೇ ದುಡ್ ಕೊಡ್ತಾ ಇದೀನಿ. ಸಂಬಳವೆಲ್ಲಾ ಅದ್ಕೆ ಹೋಗ್ತಿದೆ ಏನ್ ಮಾಡಲಿ.

**ಹೆಂಡತಿ:** ಆಫೀಸಿಂದ ಬೇಗ ಬನ್ನಿ.
**ಗಂಡ:** ಯಾಕೆ, ಸಿನಿಮಾಕ್ಕೆ ಹೋಗ್ಬೇಕಾ?
**ಹೆಂಡತಿ:** ಹೌದು, ನಾನು, ಪಕ್ಕದಮನೆ ಪಂಕಜಾ ಹೋಗ್ತೀವಿ. ನೀವು ಮನೆಗೆ ಕಾವಲಿರುವಿರಂತೆ.

**ಡಾಕ್ಟರ್:** ಗುಂಡ್ಹಾಕ್ತೀಯಾ?
**ರೋಗಿ:** ಹಾಕ್ತೀನಿ ಸರ್! ಇಲ್ಲೇ ಹಾಕಣ್ವಾ, ಬಾರಿಗೆ ಹೋಗಣ್ವಾ?

**ಹೆಂಡತಿ:** ಟಿವಿಯಲ್ಲಿ ಅಂಬಾನಿ ಕಾಣಿಸಿದಾಗಲೆಲ್ಲ ಹಾಗೇ ಗಹಗಹಿಸಿ ಯಾಕೆ ನಗ್ತಿರಾ?
**ಗಂಡ:** 'ಶ್ರೀಮಂತರನ್ನು ನೋಡಿ ನಕ್ಕರೆ ಅವರಂತೆ ನಾವೂ ಆಗ್ತೇವಿ' ಅಂತ ಒಮ್ಮೆ ಪ್ರವಚನದಲ್ಲಿ ಗುರುಗಳು ಹೇಳಿದ್ರು ಕಣೇ. ಅದಕ್ಕೆ ನಾನು ದಿನಾ ಅಂಬಾನಿ ನೋಡಿ ನಗ್ತಿರ್ತಿನಿ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ